UASB LIBRARY
Jai Kisan
Agri Newspaper Clippings
Saturday 20-05-2023
Pg. 1

Bitter news for honey lovers, colonies diminish

PURAN CHOUDHARY @ Bengaluru



HERE is some not so sweet news. Dwindling number of honey colonies in Karnataka has worried experts as it affects the process of pollination and production of fruits and vegetables.

World Bee Day is celebrated on May 20 each year.

According to Dr Mohan Naik, Professor & University Head, University of Agricultural Sciences, heavy use of pesticides by farmers is a big hindrance in survival of honey bees and creation of natural nectar. He also added that an increase in temperature and changes in climatic conditions are making it difficult to rear bees.

At present, 12,699 beekeepers and 19.34 lakh of honey bee colonies are registered with the National Bee Board in India producing 1,33,200 tonnes of honey annually. In Karnataka, approximately 26,500 beekeepers are producing 1,250 tonnes of honey each year.

To create awareness on honey bee rearing, pollination, the ill-effects of using pesticides and understanding the importance of bee colonies, the University of Agricultural Sciences will organse a programme for farmers and students on May 20. Close to 100 farmers from different districts of Karnataka will be explained the hazardous impact of pesticides and chemical fertilizers on bees and students will learn how bees are reared. 'Madhumela' has also been organised at Gandhi Krishi Vigyana Kendra (GKVK) in Bengaluru from 10am to 12pm.

Additionally, the university has tied up with Indian Council of Agricultural Research (ICAR) on a project titled 'All India Coordinated Project on Honeybee Research & Training' to understand the potential role of bees as pollinators.

20-05-2023
Ind Exp Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

20-05-2023
Hosadiganta Pg 04

ದುಬಾರಿಯಾಯ್ತು ಮಾವಿನ ಬೆಲೆ | ಬೆಳೆಗಾರ ಕಂಗಾಲು

ಮಾವಿನ ಫಸಲು ಗಣನೀಯ ಇಳಿಕೆ

ದೇವನಹಳ್ಳಿ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಾವಿನ ಫಸಲು ಗಣನೀಯ ಇಳಿಕೆಯಾಗಿದೆ. ಹೂವು ಬರುವ ಸಮಯದಲ್ಲಿ ಬಿದ್ದ ಅಕಾಲಿಕ ಮಳೆಯಿಂದಾಗಿ ಹೂವು ಉದುರಿ, ಕಡಿಮೆ ಇಳುವರಿ ಬಂದ ಕಾರಣ ಮಾವಿನ ಹಣ್ಣಿನ ಬೆಲೆ ದುಬಾರಿಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 7500ಕ್ಕೂ ಹೆಚ್ಚು ಹೆಕ್ಟೇರ್‌ನಲ್ಲಿ ಮಾವಿನ ಫಸಲು ಇದ್ದು, ಇವುಗಳಲ್ಲಿ ಬಾದಾಮಿ, ರಸಪುರಿ, ತೋತಾಪುರಿ, ಮಲ್ಲಿಕಾ ಸೇರಿದಂತೆ ವಿವಿಧ ತಳಿಗಳ ಮಾವು ದೇವನಹಳ್ಳಿ ಸೇರಿದಂತೆ ಜಿಲ್ಲೆಯಾದ್ಯಂತ ಮಾವು ಬೆಳೆಯಲಾಗುತ್ತಿದೆ, ಕಳೆದ ವರ್ಷಕ್ಕೆ ಹೋಲಿಸಿದರೆ ಮಾವಿನ ಬೆಲೆ ಏರಿಕೆ ಕಂಡಿದೆ. ದೇವನಹಳ್ಳಿ ತಾಲೂಕು ವ್ಯಾಪ್ತಿಯಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭಗೊಂಡ ನಂತರ ಭೂಮಿ ಬೆಲೆ ಗಗನಕ್ಕೇರಿದೆ, ಬಡಾವಣೆಗಳ ನಿರ್ಮಾಣ ಹಾಗೂ ಚನ್ನರಾಯಪಟ್ಟಣ ಹೋಬಳಿಯಲ್ಲಿ ಕೆಐಎಡಿಬಿಗೆ ಸಾವಿರಾರು ಎಕರೆ ಭೂಸ್ವಾಧೀನ ಹಾಗೂ ಭೂಸ್ವಾಧೀನ ಪ್ರಕ್ರಿಯೆಗಳು ಆಗುತ್ತಿರುವುದರಿಂದ ಫಲವತ್ತಾದ ಭೂಮಿಗಳನ್ನು ರೈತರು ಕಳೆದುಕೊಳ್ಳುತ್ತಿದ್ದಾರೆ, ಇರುವ ಅಲ್ಪಸ್ವಲ್ಪ ಜಮೀನಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದಾರೆ.



> ಮಾವು ಬೆಳೆಗೆ ಮಾರಾಟ ಮಾಡಲು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ತೋಟಗಾರಿಕೆ ಇಲಾಖೆ ಮಾಡಿಕೊಡಬೇಕು. ಈ ಬಾರಿ ಕೂಡ ಫಸಲು ಇಳಿಕೆ ಕಂಡಿದೆ. ಮಾರುಕಟ್ಟೆಯಲ್ಲಿ ಮಾವು ಬೆಲೆ ದರ ಇದೆ. ಗುಣಮಟ್ಟದ ಮಾವನ್ನು ಮಾರಾಟ ಮಾಡಲಾಗುತ್ತಿದೆ.
> ■ ಹರೀಶ್, ಬೆಳೆಗಾರ

ಕಾಯಿ ಉದುರುವಿಕೆ

ಈ ಬಾರಿ ಬೇಸಿಗೆ ಆರಂಭದಲ್ಲಿ ಮಾವಿನ ಗಿಡಗಳಲ್ಲಿ ಉತ್ತಮವಾಗಿ ಹೂವುಗಳು ಕಂಡುಬಂದಿದ್ದರಿಂದ ಉತ್ತಮ ಫಸಲು ಕೈಸೇರುವ ನಿರೀಕ್ಷೆಯಿತ್ತು. ಈ ವರ್ಷ ಬರುವ ಬೆಳೆ ಪಡೆದು ಹಣ್ಣಿನ ಸುಗ್ಗಿಯಲ್ಲಿ ದೊಡ್ಡ ಮೊತ್ತದ ಹಣ ಮಾಡಿಕೊಳ್ಳುವ ಕನಸು ಬೆಳೆಗಾರರು ಕಟ್ಟಿಕೊಂಡಿದ್ದರು. ಆದರೆ ತೀವ್ರ ಮಳೆಯ ಕೊರತೆ ಹಾಗೂ ಹವಾಮಾನ ವೈಪರೀತ್ಯದಿಂದ ತೇವಾಂಶ ಕುಸಿತದಿಂದ ಹೂ, ಕಾಯಿ ಉದುರುವಂತೆ ಮಾಡಿದ್ದು, ಇಡೀ ಮಾವು ಸಿಜನ್ ಲೆಕ್ಕಾಚಾರ ತಲೆಕೆಳಗಾಗುವಂತೆ ಮಾಡಿದೆ. ಮಾವಿನ ಹಣ್ಣಿನ ದರ ಕೂಡ ಗಣನೀಯ ಏರಿಕೆ ಕಂಡಿದೆ.

ಮಾವು ಮೇಳ

ಕಳೆದ ಎರಡು ವರ್ಷಗಳಿಂದ ಜಿಲ್ಲೆಯಲ್ಲಿ ಮಾವು ಬೆಳೆಗಾರರಿಗೆ ಮಾರುಕಟ್ಟೆ ಒದಗಿಸುವ ಸಲುವಾಗಿ ಮಾವು ಮೇಳವನ್ನು ತೋಟಗಾರಿಕೆ ಇಲಾಖೆ ಮಾಡಿಕೊಂಡು ಬಂದಿದೆ. ಕಳೆದ ವರ್ಷ ದೇವನಹಳ್ಳಿ ಪಟ್ಟಣದ ರಾಣಿ ಸರ್ಕಲ್‌ನಲ್ಲಿ ಮಾವು ಮೇಳ ಮಾಡಿ 15ಲಕ್ಷವರೆಗೂ ವಹಿವಾಟು ನಡೆಸಲಾಗಿತ್ತು. ಈ ಬಾರಿಯೂ ಮಾವು ಮೇಳ ನಡೆಯಬೇಕಾಗಿತ್ತು, ರಾಜ್ಯ ಚುನಾವಣೆ ಇದ್ದದ್ದರಿಂದ ತಡವಾಗಿದೆ. ಮುಂದಿನ ದಿನಗಳಲ್ಲಿ ಮಾವು ಮೇಳ ಆಯೋಜನೆ ಮಾಡುತ್ತಾರೆ ಎನ್ನುವ ನಿರೀಕ್ಷೆಯಲ್ಲಿದ್ದಾರೆ.

ಅಕಾಲಿಕ ಮಳೆ: ಬೆಳೆ ಕುಂಠಿತ

ಬೇಸಿಗೆ ತಾಪ, ಅಕಾಲಿಕ ಮಳೆ ಪ್ರಭಾವದಿಂದ ಮಾವಿನ ಹೂ, ಕಾಯಿಗಳ ಮೇಲೆ ಪರಿಣಾಮ ಬೀರಿ ಬೆಳೆ ಕುಂಠಿತಗೊಂಡಿದೆ. ಮಾರುಕಟ್ಟೆಗೆ ಮಾವಿನ ಬೆಲೆ ಕಳೆದ ವರ್ಷಕ್ಕಿಂತ ಪ್ರತಿ ಕೆಜಿಗೆ 15ರಿಂದ 25ರೂ. ಹೆಚ್ಚಳವಾಗಿದ್ದು, ಗ್ರಾಹಕರು ಖರೀದಿಗೆ ಹಿಂದುಮುಂದು ನೋಡುವಂತಾಗಿದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಬಾದಾಮಿ ಕೆಜಿಗೆ 150, ಮಲಗೋವಾ 150, ಮಲ್ಲಿಕಾ 120, ದರ ಇದ್ದು, ರಸಪುರಿಗೆ 80ರೂ. ದರವಿದೆ.

20-05-2023
Udayavani Pg 05

ತೊಗರಿ ಬೆಳೆಗಾರರ 'ಕೈ' ಹಿಡಿಯುತ್ತಾ ಸರ್ಕಾರ?

• ಹಣಮಂತರಾವ ಭೈರಾಮಡಗಿ

ಕಲಬುರಗಿ: 2022-23ನೇ ಸಾಲಿನ ಈ ಭಾಗದ ಪ್ರಮುಖ ವಾಣಿಜ್ಯ ಬೆಳೆ ತೊಗರಿ ನೆಟೆರೋಗದಿಂದ ಹಾಳಾಗಿರುವುದಕ್ಕೆ ಪರಿಹಾರ ಇನ್ನೇನು ಸಿಕ್ಕೇ ಬಿಟ್ಟು ಎನ್ನುವಷ್ಟರಲ್ಲಿ ತೊಗರಿ ರೈತನ ಹಣೆಬರಹ ಮತ್ತೆ ಅಯೋಮಯವಾಗಿದೆ.

ಈ ಭಾಗದ ವಾಣಿಜ್ಯ ಬೆಳೆ ತೊಗರಿಯು ನೆಟೆರೋಗದಿಂದ ಶೇ.90ರಷ್ಟು ಹಾನಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ನೆಟೆರೋಗದ ಪರಿಹಾರ ಇನ್ನೇನು ಕೈಗೆ ಸೇರಿತು ಎನ್ನುವಷ್ಟರಲ್ಲಿಯೇ ಬಾರದೇ ಕನ್ನಡಿಯೊಳಗಿನ ಗಂಟಾಗಿರುವುದು ವಾಸ್ತವಿಕತೆಗೆ ಹಿಡಿದ ಕನ್ನಡಿಯಾಗಿದೆ.

ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ತೊಗರಿ ನೆಟೆರೋಗಕ್ಕೆ ಒಳಗಾಗಿ ರೈತ ಬೀದಿಗಿಳಿದಿರುವುದರಿಂದ ಹಾಗೂ ಪ್ರತಿಪಕ್ಷ ಕಾಂಗ್ರೆಸ್ ಪ್ರತಿಭಟನೆ ನಡೆಸಿದ್ದರಿಂದ ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಹೆಕ್ಟೇರ್‌ಗೆ 10 ಸಾವಿರ ರೂ. ಪರಿಹಾರದಂತೆ ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಯ ರೈತರಿಗೆ 223 ಕೋಟಿ ರೂ. ಪರಿಹಾರ ಸರ್ಕಾರ ಘೋಷಣೆ ಮಾಡಿತು. ಅಲ್ಲದೇ ಮುಂಗಡ ಪತ್ರದಲ್ಲೂ ಪ್ರಕಟಿಸಲಾಯಿತು. ಚುನಾವಣೆ ಘೋಷಣೆಯ ನಾಲ್ಕೈದು ದಿನಗಳ ಮುಂಚೆ ಕಲಬುರಗಿಗೆ ಬಂದ ಸಂದರ್ಭದಲ್ಲಿ ಆಗಿನ ಸಿಎಂ ಬಸವರಾಜ ಬೊಮ್ಮಾಯಿ ಅವರು ಎರಡ್ಮೂರು ದಿನದೊಳಗೆ ರೈತರ ಖಾತೆಗೆ ಪರಿಹಾರ ಹಣ ಜಮಾ ಆಗುವುದು ಎಂದು ಹೇಳಿದ್ದರು. ಚುನಾವಣೆ ಮುಂಚಿಯೇ ತೊಗರಿ ನೆಟೆರೋಗದ ಪರಿಹಾರ ರೈತರ ಕೈಗೆ ಸೇರಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷೆ ಠುಸ್ ಆಗಿದ್ದರಿಂದ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಈಗಲಾದರೂ ಪರಿಹಾರ ದೊರಕಬಹುದೇ ಎಂದು ರೈತರು ಕಾಯುತ್ತಿದ್ದಾರೆ.



ಕಲಬುರಗಿ: ಆಳಂದ ತಾಲೂಕಿನ ಲಾಡ ಚಿಂಚೋಳಿಯ ಹೊಲವೊಂದರಲ್ಲಿ ನೆಟೆ ರೋಗ ತಗುಲಿ ಹಾಳಾದ ತೊಗರಿಯನ್ನು ಸಹಾಯಕ ಕೃಷಿ ನಿರ್ದೇಶಕ ಪಿ.ಎಂ. ಮಲ್ಲಿಕಾರ್ಜುನ ಪರಿಶೀಲಿಸಿದ್ದರು. (ಸಂಗ್ರಹ ಚಿತ್ರ)

223 ಕೋಟಿ ರೂ. ತೊಗರಿ ನೆಟೆರೋಗದ ಪರಿಹಾರ ಬಿಡುಗಡೆಗೆ ಎಲ್ಲಿ ತೊಡಕಾಗಿದೆ? ಇದಕ್ಕೆ ಸಂಬಂಧಿಸಿದಂತೆ ಹಣಕಾಸು ಇಲಾಖೆ ಸಹ ಅನುಮೋದನೆ ನೀಡಿದೆ ಎನ್ನಲಾಗಿದ್ದರೂ ಪರಿಹಾರದ ಹಣ ರೈತರ ಖಾತೆಗಳಿಗೆ ಏಕೆ ಜಮಾ ಆಗಲಿಲ್ಲ? ಎಂಬುದಕ್ಕೆ ಯಾರಿಂದಲೂ ಸಮರ್ಪಕ ಉತ್ತರ ಸಿಗುತ್ತಿಲ್ಲ. ತೊಗರಿ ನೆಟೆರೋಗದಿಂದ ಹಾಳಾಗಿರುವುದು ಕಳೆದ ನವೆಂಬರ್-ಡಿಸೆಂಬರದಲ್ಲೇ. ಹೀಗಾಗಿ ಬೆಳಗಾವಿ ಅಧಿವೇಶನದಲ್ಲೇ ತೊಗರಿ ನೆಟೆರೋಗಕ್ಕೆ ಸೂಕ್ತ ಪರಿಹಾರ ನೀಡುವುದಾಗಿ ಆಗಿನ ಸಿಎಂ ಬಸವರಾಜ ಬೊಮ್ಮಾಯಿ ಜಿಲ್ಲೆಯ ಶಾಸಕರ ನಿಯೋಗಕ್ಕೆ ಸ್ಪಷ್ಟ ಭರವಸೆ ನೀಡಿದ್ದರು. ಈ ಪರಿಣಾಮ ಸಮೀಕ್ಷೆ ಸಹ ನಡೆಸಲಾಯಿತು. ಅಂದಾಜು ಕಲಬುರಗಿಯಲ್ಲೇ 1.94 ಹೆಕ್ಟೇರ್ ಭೂಮಿಗೆ ಪರಿಹಾರ ನೀಡುವ ಕುರಿತು ನಿರ್ಧರಿಸಲಾಗಿ, ಒಟ್ಟಾರೆ 223 ಕೋಟಿ ರೂ. ಪರಿಹಾರ ಎಂಬುದಾಗಿ ನಿಗದಿ ಮಾಡಲಾಗಿ, ಇದನ್ನು ಬಜೆಟ್‌ನಲ್ಲೂ ಪ್ರಸ್ತಾಪಿಸಲಾಯಿತು. ಆದರೆ ಮಾರ್ಚ್ ಅಂತ್ಯದವರೆಗೂ ರೈತರ ಖಾತೆಗೆ ಪರಿಹಾರ ಜಮಾ ಆಗಲೇ ಇಲ್ಲ. ಬರೀ ಭರವಸೆ ಮಾತುಗಳನ್ನೇ ಕೇಳಬೇಕಾಯಿತು. ಈಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದು ಪರಿಹಾರ ನಿರೀಕ್ಷೆಯಲ್ಲಿದ್ದಾನೆ ರೈತ.

ಮುಂಗಾರು ಹಂಗಾಮಿಗೆ ಸಹಾಯಕ: ನೂತನ ಸರ್ಕಾರ ತಕ್ಷಣ ತೊಗರಿ ನೆಟೆರೋಗಕ್ಕೆ ಪರಿಹಾರ ಬಿಡುಗಡೆ ಮಾಡಿದಲ್ಲಿ ಮುಂಗಾರು ಹಂಗಾಮಿಗೆ ಬೀಜ ಹಾಗೂ ಗೊಬ್ಬರ ಖರೀದಿಗೆ ಸ್ವಲ್ಪ ಪ್ರಮಾಣದಲ್ಲಾದರೂ ಸಹಾಯವಾಗುತ್ತದೆ. ಸೂಕ್ತ ಪರಿಹಾರಕ್ಕೆ ಆಗ್ರಹಿಸಿದವರೇ ಈಗ ಆಡಳಿತ ಚುಕ್ಕಾಣಿ ಹಿಡಿದಿದ್ದಾರೆ. ಆಗ್ರಹ ಮಾಡಿದಾಗಿನ ಆಸಕ್ತಿ ಈಗ ತೋರಿದರೆ ಸಾಕು ಎನ್ನುತ್ತಿದ್ದಾನೆ ತೊಗರಿ ರೈತ.

ಆಗ್ರಹಿಸಿದವರ ಕೈಗೆ ಈಗ ಅಧಿಕಾರ

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ತೊಗರಿ ನೆಟೆರೋಗಕ್ಕೆ ಹೆಕ್ಟೇರ್‌ಗೆ 10 ಸಾವಿರ ರೂ. ಪರಿಹಾರ ಘೋಷಣೆ ಮಾಡಿದ್ದಕ್ಕೆ ಶಾಸಕರಾದ ಪ್ರಿಯಾಂಕ್ ಖರ್ಗೆ, ಡಾ।ಅಜಯಸಿಂಗ್ ಹೆಕ್ಟೇರ್‌ಗೆ 10 ಸಾವಿರ ರೂ. ಪರಿಹಾರ ಏತಕ್ಕೂ ಸಾಲದು. ಇದನ್ನು 25 ಸಾವಿರ ರೂ.ಗೆ ಹೆಚ್ಚಿಸಬೇಕೆಂದು ಆಗ್ರಹಿಸಿದ್ದರು. ಆದರೆ ಇವರೇ ಆಡಳಿತ ಚುಕ್ಕಾಣಿ ಹಿಡಿದಿದ್ದರಿಂದ ರೈತರಿಗೆ 10 ಸಾವಿರ ರೂ ಬದಲು 25 ಸಾವಿರ ರೂ. ಪರಿಹಾರ ದೊರಕುವುದೇ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕಿದೆ.

> **ತೊಗರಿ ನೆಟೆರೋಗದ ಪರಿಹಾರಕ್ಕೆ ಸಂಬಂಧಿಸಿದಂತೆ ಕೃಷಿ ಇಲಾಖೆ ಹಾನಿಗೊಳಗಾದ ಪ್ರದೇಶ ಹಾಗೂ ಪರಿಹಾರ ದೊಕರುವ ರೈತರ ಪಟ್ಟಿಯನ್ನು ಖಾತೆ ವಿವರಣೆ ಸಮೇತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೃಷಿ ಇಲಾಖೆಯಿಂದ ಎಲ್ಲ ಕೆಲಸ ಮುಗಿಸಲಾಗಿದೆ. ಇನ್ನೇನು ಪರಿಹಾರ ದೊರಕಬೇಕಾಗಿರುವುದು ಕಂದಾಯ ಇಲಾಖೆಯಿಂದ.**
>
> • ಬಿ. ಶರತ್, ಕೃಷಿ ಇಲಾಖೆ ಆಯುಕ್ತ

> **ತೊಗರಿ ನೆಟೆರೋಗದ ಪರಿಹಾರ ಯಾವ ಹಂತದಲ್ಲಿದೆ ಎಂಬುದನ್ನು ಎರಡ್ಮೂರು ದಿನಗಳ ನಂತರ ಮಾಹಿತಿ ಪಡೆಯಲಾಗುವುದು. ಒಟ್ಟಾರೆ ಪರಿಹಾರ ರೈತರ ಖಾತೆಗೆ ಜಮಾ ಆಗುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು.**
>
> • ಪ್ರಿಯಾಂಕ್ ಖರ್ಗೆ, ಶಾಸಕ

Duo discovers new genus, species of freshwater crabs

Niranjan.Kaggere
@timesgroup.com

Bengaluru: *Setting out on a leisurely trek amid pouring rain in Yellapura forests of the biodiversity-rich Uttara Kannada district in 2021, agriculturist Gopalakrishna Hegade and forester Manjunatha Bhajantri stumbled upon tiny crustaceans burrowing close to waterbodies. They were excited on seeing them*

IN WESTERN GHATS

but little did they know they had discovered not only a new species but a new category (genus) of crab species.

"We set out to click pictures of hornbill and other species, but we ended up snapping the crabs. While the ones we discovered in the crevasses of rocks turned out to be new species — Ghatiana dvivarna — based on two body colours, the other that we found a few kilometres away was not only a new species of freshwater crabs but also a new genus named Aradhya placida," explained Hegade.

Initially, the duo knew nothing about crabs' taxonomy and their unique morphology. "We tried looking for details online but did not find anything related to these crabs. Then our friend Dr Varadagiri, who was earlier with Bombay Natural History Society, connected us with Prof Sameer Kumar Pati of Zoological Survey of India," Hegade said.

Scientists at ZSI immediately documented Ghatiana dvivarna and published a scientific article announcing the discovery. But establishing the identity of the other sets of crabs took time as they were contrastingly different from the known crab genera. "The new species underwent DNA analysis and testing, which recently proved that they were a new category (genus) and species of freshwater crabs," Hegade added. Their discovery has made it to the latest edition of the zoological journal Zootaxa.



PICS: TOI

FRESH FIND: The genus is named Aradhya placida. (Right) Prof Sameer Kumar Pati, agriculturist Gopalakrishna Hegade and forester Manjunatha Bhajantri

The team named the new genus and species of gecarcinucid freshwater crabs Aradhya placida. "When we collected a few crabs as specimens for further research, we kept them in a box. Unlike regular crab species which fight with one another, these were peaceful. Hence, using the Latin adjective placida we proposed 'Peaceful Crabs' (English) or 'Shantiyuta Edi' (Kannada) as the common name of the new species. Taxonomically, we named it Aradhya, after our team member Bhajantri's daughter, which in Sanskrit means 'the first one', documenting the species as the first among Indian gecarcinucid crab genus that is non-aggressive," Hegade explained.

The team noticed that these crabs were active during twilight and night hours all through monsoon. While Hegade took to agriculture after class 10, Bhajantri is currently serving as a forest guard. The new species has a dark brown dorsal surface of the carapace, and their chelipeds and ambulatory legs along with the ventral surface of the carapace are paler.

"Largely found in the evergreen forests of central Western Ghats in Uttara Kannada, the crabs inhabit burrows in gravel-mixed soil at a depth of 2 to 3 feet. While crabs usually inhabit shallow waterbodies or streams, these were seen at the base of large trees and boulders. There was at least a 60cm distance between each of the burrows. They appear to have adapted to semi-terrestrial life. We recorded about 20-25 crabs in a radius of 20 metres," Hegade recalled.

20-05-2023
Times of Ind Pg 06

20-05-2023
Hosadiganta Pg 08

ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಇಲಾಖೆ ಅಧಿಕಾರಿಗಳಿಂದ ಜಾಗೃತಿ, ಸಲಹೆ ಸೂಚನೆ | ಜಿಲ್ಲೆಯಲ್ಲಿ 5,571 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ

ಹೆಚ್ಚಿದ ಬಿಸಿಲಿನ ತಾಪಮಾನ: ಬೆಳೆಗಾರರಲ್ಲಿ ರೇಷ್ಮೆಗೆ ಸಪ್ಪೆರೋಗದ ಭೀತಿ

ದೇವನಹಳ್ಳಿ: ಬಯಲು ಸೀಮೆಯ ಪ್ರದೇಶಗಳಲ್ಲಿ ಅದರಲ್ಲೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರೇಷ್ಮೆ ಬೇಸಾಯ ಮತ್ತು ಹೈನುಗಾರಿಕೆ ರೈತರಿಗೆ ಪ್ರಮುಖವಾಗಿದೆ. ಜಿಲ್ಲೆಯಲ್ಲಿ ರೇಷ್ಮೆ ಬೆಳೆ ತಾಪಮಾನ ಹೆಚ್ಚಳದಿಂದ ಸಪ್ಪೆರೋಗ ಬರುವ ಆತಂಕದಲ್ಲಿ ರೈತರು ಕಂಗಾಲಾಗುವಂತೆ ಮಾಡಿದೆ.

ಸದ್ಯಕ್ಕೆ ಜಿಲ್ಲೆಯಲ್ಲಿ ಸಪ್ಪೆರೋಗ ಕಂಡುಬರದಿದ್ದರೂ ಮಳೆಯಿಲ್ಲದೇ ತಾಪಮಾನ ಹೆಚ್ಚಳವಾಗುತ್ತಿದ್ದು, ಇದರಿಂದ ರೋಗ ಆತಂಕ ಹೆಚ್ಚಳಗೊಂಡಿದೆ. ರೇಷ್ಮೆ ಬೆಳೆಗೆ ಮೂಲ ಆಧಾರವೇ ಹಿಪ್ಪುನೇರಳೆಸೊಪ್ಪು ಗ್ರಾಮೀಣ ಭಾಗದಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಬರು ಬೇಸಿಗೆ ಬಿಸಿಲಿನ ಪ್ರಭಾವ ರೇಷ್ಮೆ ಹುಳುಗಳೊಂದಿಗೆ ಸೊಪ್ಪಿಗೂ ತಟ್ಟಿದೆ. ರೋಗದಲ್ಲಿ ತೇವಾಂಶ ಬೇಸಿಗೆಯಲ್ಲಿ ಕುಸಿಯುವ ಹಿನ್ನೆಲೆ ಮಳೆಗಾಲ ಚಳಿಗಾಲಕ್ಕೆ ಹೋಲಿಸಿದರೆ, ಹಿಪ್ಪುನೇರಳೆಸೊಪ್ಪಿಗೆನೀರಿನ ಅವಶ್ಯಕತೆ ಹೆಚ್ಚಾಗಿ ಇರುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ನೀರು ಕೊಡುವ ಮೂಲಕ ಸೊಪ್ಪನ್ನು ಹೆಚ್ಚಾಗಿ ಬೆಳೆಯಲು ಪ್ರಯತ್ನಿಸಬಹುದು. ಇಲ್ಲವಾದಲ್ಲಿ ರೇಷ್ಮೆ ಸೊಪ್ಪಿಗೆ ಸಮಸ್ಯೆಯಾಗಿ ಸೊಪ್ಪು ಹಾಗೂ ರೇಷ್ಮೆ ಗೂಡಿನ ಬೆಲೆ ಏರುವ ಸಾಧ್ಯತೆ ಇದೆ.

ಬ್ಯಾಕ್ಟೀರಿಯಾಗಳಿಂದ ಸೋಂಕು

ಸೈಟೋಪ್ಲಾಸ್ಮಿಕ್ ಪಾಲಿಹೆಡ್ರೋಸ್ ವೈರಸ್ ಕೆಂಪು ವೈರಸ್‌ಗಳಿಂದ ಹಾಗೂ ಹಲವು ಬ್ಯಾಕ್ಟೀರಿಯಗಳಿಂದ ರೋಗ ಹರಡುತ್ತದೆ. ಎಂಬುದು ತಜ್ಞರ ಅಭಿಪ್ರಾಯ. ಈ ರೋಗಕ್ಕೆ ತುತ್ತಾದ ಹುಳುಗಳ ಬೆಳವಣಿಗೆಗೆ ಕುಂಠಿತವಾಗುತ್ತದೆ. ಬಾಯಿಲೆಯಿಂದ ಸಾವನ್ನಪ್ಪಿದ ಹುಳುಗಳು ದೇಹ ಕಂದು ಬಣ್ಣಕ್ಕೆ ತಿರುಗುತ್ತದೆ. ರೋಗಪೀಡಿತ ಹುಳುಗಳು ಗೂಡು ಕಟ್ಟುವ ಚುರುಕಿಯಲ್ಲಿ ನೇತು ಬೀಳುವುದು ಕಂಡುಬರುತ್ತದೆ. ತಾಪಮಾನ ಹೆಚ್ಚಳದಿಂದ ರೋಗ ಹೆಚ್ಚಾಗುವ ಲಕ್ಷಣ ಮುಂದಿನ ದಿನಗಳಲ್ಲಿ ಕಂಡುಬರುವ ಸಾಧ್ಯತೆಗಳಿವೆ. ಮುಂಕಾಗ್ರತೆ ಕ್ರಮವಾಗಿ ರೇಷ್ಮೆ ಬೆಳೆಗಾರರಿಗೆ ತಾಪಮಾನ ನಿಯಂತ್ರಿಸುವ ಬಗ್ಗೆ ಸಲಹೆ ಸೂಚನೆಗಳನ್ನು ರೇಷ್ಮೆ ಇಲಾಖೆ ಅಧಿಕಾರಿಗಳು ಇದರ ಜೊತೆಗೆ ರೇಷ್ಮೆ ಸೊಪ್ಪಿನ ಬೆಳೆಗೂ ಮಾಹಿತಿ ನೀಡಲಾಗುತ್ತಿದೆ.



5,571 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 5,571 ಹೆಕ್ಟರ್ ಪ್ರದೇಶದಲ್ಲಿ ರೇಷ್ಮೆ ಬೆಳೆ ಇದೆ. ಕಳೆದ ವರ್ಷದ ಅಂತ್ಯದಲ್ಲಿ ಚಳಿಯ ಪ್ರಭಾವದಿಂದ ರೇಷ್ಮೆ ಬೆಳೆ ಸರಿಯಾಗಿ ಬಂದಿರಲಿಲ್ಲ. ಇದೀಗ ಜಿಲ್ಲೆಯಲ್ಲಿ ಬಿಸಲ ತಾಪ ಹೆಚ್ಚಾಗುತ್ತಿದೆ. ರೇಷ್ಮೆ ಬೆಳೆಗೆ ಸಪ್ಪೆರೋಗ ಕಾಡುವ ಆತಂಕ ಹೆಚ್ಚಾಗಿದೆ. ಸಪ್ಪೆರೋಗದ ಬಗ್ಗೆ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಇಲಾಖೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ.

ಬೇಸಿಗೆಯಲ್ಲಿ ಉಷ್ಣಾಂಶ 35 ಡಿಗ್ರಿಗೂ ಹೆಚ್ಚಿರುವ ಕಾರಣ ರೇಷ್ಮೆಹುಳು ಸಪ್ಪೆಯಾಗುತ್ತಿದ್ದು, ಚಂದ್ರಿಕೆಗಳಲ್ಲಿ ಸರಿಯಾಗಿ ಗೂಡು ಕಟ್ಟುತ್ತಿಲ್ಲ. ಗೂಡಿನಲ್ಲಿ ನುಲು ಬಿಚ್ಚಾಣಿಕೆಯೂ ಸರಿಯಾಗಿಲ್ಲ. ಈ ಕಾರಣದಿಂದ ಗೂಡು ಖರೀದಿಗೆ ನೂಲು ಬಿಚ್ಚಾಣಿಕೆದಾರರು ಹಿಂದೇಟು ಹಾಕುತ್ತಿದ್ದು, ಮಾರುಕಟ್ಟೆಯಲ್ಲಿ ಸರಾಸರಿ 354 ರೂ. ಮಾರಾಟವಾಗುತ್ತಿದೆ. ಉತ್ತಮ ಗುಣಮಟ್ಟದಲ್ಲಿರುವ ಗೂಡು 470 ರೂ. ಮಾರಾಟವಾಗುತ್ತಿದೆ.

> **ಇತ್ತೀಚಿನ ದಿನಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವುದರಿಂದ ರೇಷ್ಮೆ ಬೆಳೆ ಸಪ್ಪೆರೋಗ ಬರುವ ಆತಂಕದಲ್ಲಿ ಇದ್ದೇವೆ. ಗೂಡಿನ ದರ ಇಳಿಕೆ ಕಂಡಿದೆ. ರೇಷ್ಮೆ ಬೆಳೆ ಬೆಳೆದು ಜೀವನ ಸಾಗಿಸುತ್ತಿದ್ದೇವೆ. ಈ ರೀತಿ ಇರುವಾಗ ಇಂತಹ ಖಾಯಿಲೆಗಳು ಬರುವುದರಿಂದ ರೈತರಲ್ಲಿ ಆತಂಕ ಮನೆ ಮಾಡುವಂತಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ವೈಜ್ಞಾನಿಕವಾಗಿ ವರದಿ ನೀಡಿದರೂ ಸಹ ಯಾವುದೇ ಪ್ರಯೋಜನವಿಲ್ಲ.**
>
> ■ ಕೊಯಿರಾ ಚಿಕ್ಕೇಗೌಡ, ರೇಷ್ಮೆ ಬೆಳೆಗಾರ

> **ರೇಷ್ಮೆ ಬೆಳೆಗಳಿಗೆ ಸಪ್ಪೆರೋಗ ಜಿಲ್ಲೆಯಲ್ಲಿ ಕಂಡುಬರದಿದ್ದರೂ ರೈತರಿಗೆ ಸಪ್ಪೆರೋಗದ ಬಗ್ಗೆ ಜಾಗೃತಿ ಮತ್ತು ಯಾವ ರೀತಿ ನಿಯಂತ್ರಿಸಬೇಕು ಎಂಬುವುದರ ಬಗ್ಗೆ ಸಲಹೆ ಮಾರ್ಗದರ್ಶನ ವನ್ನು ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ತಾಪಮಾನ ಇನ್ನಷ್ಟು ಹೆಚ್ಚಾದರೆ ಪರಿಣಾಮ ಮುಂದಿನ ದಿನಗಳಲ್ಲಿ ಸಪ್ಪೆರೋಗ ರೇಷ್ಮೆ ಯಲ್ಲಿ ಕಂಡುಬರುವ ಸಾಧ್ಯತೆ ಇರುತ್ತದೆ.**
>
> ■ ಪ್ರಭಾಕರ್, ಉಪನಿರ್ದೇಶಕ, ರೇಷ್ಮೆ ಇಲಾಖೆ

> **ಸರ್ಕಾರದಿಂದ ಪ್ರೋತ್ಸಾಹಧನ ಪಡೆಯಲು ಮಾರಾಟದ ಥಾಖಲೆ ಇರುಬೇಕು. ಗೂಡು ಮಾರಾಟವಾಗುವಂತೆ ಅಕೇಶ ಬಾರಿ ರೈತರಲ್ಲಿ ಮನವಿ ಮಾಡಿಕೊಂಡಿದ್ದೇವೆ. ವಾತಾವರಣದಲ್ಲಿ ಉಷ್ಣಾಂಶ ಏರಿಕೆಯಿಂದ ರೇಷ್ಮೆ ಹುಳು ಬೆಳವಣಿಗೆಯ ವ್ಯತ್ಯಾಸವಾಗುತ್ತಿದೆ.**
>
> ■ ಡಾ.ಎಸ್. ಸುಂದರ್‌ರಾಜ್, ಉಪನಿರ್ದೇಶಕ, ರೇಷ್ಮೆ ಗೂಡು ಮಾರುಕಟ್ಟೆ